ದಿ: 10-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಇ.ಎಸ್.ಐ., ವಕೀಲರಿಂದ ಆರೋಪಿತರ ಪರವಾಗಿ**:

5. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ-1 ನ್ನು ಪೊಲೀಸರು ಬರೆದರು. ಆ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಪೊಲೀಸರ ಸಹಿ ಇಲ್ಲ ಅಂದರೆ ನಿಜ. 2016 ರಲ್ಲಿ ನಾನು ಬೇತೂರು ರಸ್ತೆ, 4 ನೇ ಕ್ರಾಸ್ ನಲ್ಲಿ ವಾಸವಿದ್ದೆ. ನನ್ನ ಮನೆಯ ಅಕ್ಕಪಕ್ಕದಲ್ಲಿ ಇತರ ಮನೆಗಳು ಇರುತ್ತವೆ. ಸಂಜೆ 7.00 ಅಥವಾ 8.00 ಗಂಟೆಗೆ ನಾನು ನನ್ನ ಮಗಳು ಪುನೀತಾರವರನ್ನು ಹೆರಿಗೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನನ್ನೊಂದಿಗೆ ನನ್ನ ಮಗ ಸಹ ಬಂದಿದ್ದ. ಮನೆಯಲ್ಲಿ ಚಾಸಾ-2 ರವರು ಇದ್ದರು. ಆಸ್ಪತ್ರೆಯಿಂದ ನಾನು 7.00-8.00 ಗಂಟೆಗೆ ಮನೆಗೆ ಬಂದೆ. ಸಾಕ್ಷಿದಾರರು ಹೇಳುತ್ತಾರೆ ಮಧ್ಯಾಹ್ನನೇ ಆಸ್ಪತ್ರೆಗೆ ಹೋಗಿದ್ದೆವು. ನಿಪಿ-1 ರಲ್ಲಿ ಆಸ್ಪತ್ರೆಗೆ ಮಧ್ಯಾಹ್ನ ಹೋಗಿದ್ದು, ಮನೆಗೆ 7.00-8.00 ಗಂಟೆಗೆ ಬಂದಿದ್ದು ಹೇಳಿಲ್ಲ.

6. ಸಿದ್ದೇಶ್ವರ ಬಡಾವಣೆಯಲ್ಲಿ 1 ನೇ ಆರೋಪಿಯ ಮನೆ ಇರುತ್ತದೆ. ಅವರ ಮನೆಯಲ್ಲಿ ತಂದೆ ತಾಯಿ ಇದ್ದಾರೆ. 2 ಮತ್ತು 3 ನೇ ಆರೋಪಿತರು ಸಿದ್ದೇಶ್ವರ ಬಡಾವಣೆಯಲ್ಲಿಯೇ ವಾಸವಿದ್ದಾರೆ. ಅವರ ಮನೆ ಮತ್ತು ನಮ್ಮ ಮನೆ ಒಂದೇ ಓಣಿಯಲ್ಲಿ ಇರುತ್ತದೆ. 1 ನೇ ಆರೋಪಿಯ ಮನೆಯ ಪಕ್ಕದಲ್ಲಿಯೇ ನಾನು ಒಂದು ಕಟ್ಟಡವನ್ನು ಕಟ್ಟಿಸಿದ್ದೇನೆ ಅಂದರೆ ನಿಜ. ನೆಲ ಹಂತಸ್ತಿನಲ್ಲಿ ಮೂರು ಮನೆಗಳಿವೆ ಅದರ ಮೇಲೆ ಒಂದು ಮನೆ ಇದೆ. ನಮ್ಮ ಮನೆ ಮತ್ತು 1 ನೇ ಆರೋಪಿಯ ಮನೆಯ ನಡುವೆ ಒಂದೇ ಸಾಮಾನ್ಯ ಗೋಡೆ ಇರುತ್ತದೆ. ಈ ಮನೆ ಕಟ್ಟುವ ವಿಚಾರದಲ್ಲಿ ನಮ್ಮ ಮತ್ತು 1 ನೇ ಆರೋಪಿಯ ನಡುವೆ ಗಲಾಟೆಯಾಗಿದೆ ಅಂದರೆ ನಿಜ. ನಾನು, ನನ್ನ ಮಗ ಮತ್ತು ಸೊಸೆ ಸಿದ್ಧೇಶ್ವರ ಬಡಾವಣೆಯಲ್ಲಿ ವಾಸವಿರುತ್ತಾರೆ. ನನ್ನ ಮಗಳು ಬೇತೂರು ರಸ್ತೆ 2 ನೇ ಕ್ರಾಸ್ ನಲ್ಲಿ ಇರುತ್ತಾರೆ. ನನಗೆ ಮತ್ತು 1 ನೇ ಆರೋಪಿಗೆ ಮನೆಯ ವಿಚಾರದಲ್ಲಿ ದ್ವೇಷ ಇದೆ ಅಂದರೆ ನಿಜ. ಆಸ್ಪತ್ರೆಯಿಂದ ನಾನು ಮನೆಗೆ ಬಂದಾಗ ಚಾಸಾ-2 ರವರು ಮನೆಯಲ್ಲಿ ಇಲ್ಲದ ಬಗ್ಗೆ ನಾನು ಅಕ್ಕಪಕ್ಕದಲ್ಲಿ ವಿಚಾರಿಸಿದ್ದೆ. ಅಕ್ಕಪಕ್ಕದವರು

ಅಂದರೆ ಅಕೀಲಾ, ನೂರುಅಹಮ್ಮದ್, ಶಕೀಲಾ ಬಾನು ಅಂತ ಇರುತ್ತಾರೆ. ಆಗ ಅವರು ನನಗೆ ಗೊತ್ತಿಲ್ಲ ಅಂತ ಹೇಳಿದರು.

7. ರುಕ್ಕಮ್ಮರವರು ನನಗೆ ಚಾಸಾ-2 ರವರನ್ನು ಬಲವಂತವಾಗಿ ಅಪಹರಣ ಮಾಡಿದ್ದಾರೆ ಅಂತ ಹೇಳಿದ್ದರು, ಅದನ್ನು ನಾನು ದೂರು ಕೊಡುವ ಕಾಲಕ್ಕೆ ಹೇಳಿದ್ದೆ. ರುಕ್ಕಮ್ಮರವರು ನಮ್ಮ ಮನೆಯ ಪಕ್ಕದ ಓಣಿಯಲ್ಲಿ ವಾಸವಿದ್ದಾರೆ. ಅವರು 3 ನೇ ಕ್ರಾಸ್ ನಲ್ಲಿ ವಾಸವಿದ್ದಾರೆ. ಅಪಹರಣ ಮಾಡುವ ಕಾಲಕ್ಕೆ ನನ್ನ ಮಗಳು /ಚಾಸಾ-2 ರವರು ಚೀರಾಡುತ್ತಿದ್ದರು ಅಂತ ಹೇಳಿಲ್ಲ ಆದರೆ ಬಲವಂತವಾಗಿ ಅಪಹರಣ ಆಗಿದೆ ಅಂತ ಹೇಳಿದರು. ಬಲವಂತವಾಗಿ ಕರೆದುಕೊಂಡು ಹೋಗಿದ್ದಾರೆ ಅಂದರೆ ನನ್ನ ಮಗಳನ್ನು ಹೆದರಿಸಿ ಕರೆದುಕೊಂಡು ಹೋಗಿದ್ದಾರೆ. ಬಲವಂತವಾಗಿ ನನ್ನ ಮಗಳನ್ನು ಕರೆದುಕೊಂಡ ಹೋದ ಬಗ್ಗೆ ಯಾರನ್ನಾದರೂ ನೋಡಿದೀರಾ ಅಂತ ರುಕ್ಕಮ್ಮರವರನ್ನು ಕೇಳಿದ್ದೆ. ಮಗಳಿಗೆ ಹೆದರಿಸಿ ಕರೆದುಕೊಂಡು ಹೋಗಿದ್ದಾರೆ. ಜನರು ನೋಡುವ ಹಾಗೆ ಕರೆದುಕೊಂಡು ಹೋಗಿಲ್ಲ. ಮನೆಯಿಂದಲೇ ಚಾಸಾ-2 ರವರನ್ನು ಕರೆದುಕೊಂಡು ಹೋಗಿದ್ದಾರೆ ಅಂತ ರುಕ್ಕಮ್ಮರವರು ಹೇಳಿದರು. ಬೇತೂರು ರಸ್ತೆ, ಜಗಳೂರು ರಸ್ತೆ, ಕೊಹಿನೂರು ಹೋಟೆಲ್ ರಸ್ತೆ, ಇಮಾಮ್ ನಗರ ಈ ಎಲ್ಲಾ ಏರಿಯಾಗಳು ಅಕ್ಕಪಕ್ಕ ಇವೆ ಅಂದರೆ ನಿಜ. ಅಲ್ಲಿ ಬಹಳಷ್ಟು ಜನ ವಾಸವಿದ್ದಾರೆ ಅಂದರೆ ನಿಜ.

ಈ ಹಂತದಲ್ಲಿ ನ್ಯಾಯಾಲಯದ ವೇಳೆ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.